ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್.ವಿ.ಸಂಕನೂರು ಇವರು ಶೂನ್ಯ ವೇಳೆಯಲ್ಲಿ ಚರ್ಚಿಸಲು ನೀಡಿರುವ ಸೂಚನೆಗೆ ಮಾಹಿತಿ

**ಸೂಚನೆ: ಗದಗ ಜಿಲ್ಲೆಯ ನಾಗಾವಿ ಹಾಗೂ ಕಳಸಾಪೂರ ಗ್ರಾಮದಲ್ಲಿ ಹಲವಾರು ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವ ಜಮೀನನು ಗ್ರಾಮೀಣಾಭಿವೃದಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ಭೂಸ್ವಾಧೀನಪಡಿಸಿಕೊಂಡಿರುವುದರಿಂದ ಬಗರ್ ಹುಕುಂ ಸಾಗುವಳಿದಾರರಿಗೆ ಪರಿಹಾರ ನೀಡುವಂತೆ ಕೋರಿರುವ ಬಗ್ಗೆ**

***

- ಗದಗ ಜಿಲ್ಲೆಯ ನಾಗಾವಿ ಗ್ರಾಮದಲ್ಲಿ (ನಾಗಾವಿ, ಕಳಸಾಪೂರ ಹಾಗೂ ಮಲ್ಲಸಮುದ್ರದ ಜಮೀನುಗಳು ಒಳಗೊಂಡಂತೆ) ಕರ್ನಾಟಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಸ್ಥಾಪನೆಯಾಗಿರುತ್ತದೆ.
- ಈ ವಿಶ್ವವಿದ್ಯಾಲಯಕ್ಕೆ ಒಟ್ಟು 344-33 ಎಕರೆ/ಗುಂಟೆ ಜಮೀನು ನೇರ ಖರೀದಿ ಮೂಲಕ ಹಸ್ತಾಂತರಿಸಲಾಗಿದೆ
- ನಾಗಾವಿ ಗ್ರಾಮದ ರಿ.ಸ.ನಂ.143 ರಲ್ಲಿ 120 ಎಕರೆ ಜಮೀನನ್ನು ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 55 ಎಲ್‌ಜಿಡಿ 2018, ದಿನಾಂಕ:**24.02.2018** ರಂತೆ ವಿಶ್ವವಿದ್ಯಾಲಯಕ್ಕಾಗಿ ಮಂಜೂರಾಗಿರುತ್ತದೆ.
- ಸದರಿ ಜಮೀನಿನ ಮಧ್ಯ ಭಾಗದಲ್ಲಿನ ಜಮೀನು 13 ಭೂ ಮಾಲೀಕರ ಸ್ವಾಧೀನದಲ್ಲಿದ್ದು, ಈ ಪೈಕಿ 10-35 ಎಕರೆ/ಗುಂಟೆ ಜಮೀನು ಭೂನ್ಯಾಯ ಮಂಡಳಿಯ ಆದೇಶದನ್ವಯ ರೀಗ್ರ್ಯಾಂಟ್ ಆಗಿದ್ದ ಜಮೀನನ್ನು ಖರೀದಿ ಮಾಡಲು 2018 ರಲ್ಲಿ ಸರ್ಕಾರದಿಂದ ಅನುಮತಿಸಲಾಗಿದೆ.
- ನಾಗಾವಿ ಗ್ರಾಮದ ಸ.ನಂ.143 "ಬಿ" ಖರಾಬು ಜಮೀನಾಗಿದ್ದು, ಸದರಿ ಜಮೀನನ್ನು ಮಂಜೂರಾತಿ ಕೋರಿ ನಮೂನೆ 50, 53 ರಲ್ಲಿ ಯಾವುದೇ ಅರ್ಜಿಗಳು ಸ್ವೀಕೃವಾಗಿರುವುದಿಲ್ಲ; ಆದರೆ ನಮೂನೆ-57 ರಲ್ಲಿ 42 ಅರ್ಜಿಗಳು ಸ್ವೀಕೃತವಾಗಿರುತ್ತವೆ.
- ಸ್ವೀಕೃತವಾಗಿರುವ ಅರ್ಜಿಗಳು ಪರಿಶೀಲನಾ ಹಂತದಲ್ಲಿರುತ್ತದೆ.
- ಸದರಿ ಅರ್ಜಿಗಳನ್ನು ಪರಿಶೀಲಿಸಿ, ಅರ್ಹವಿರುವ ಅರ್ಜಿಗಳನ್ನು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯ ಮುಂದೆ ಮಂಡಿಸಿ, ಸಮಿತಿಯ ನಿರ್ಣಯದಂತೆ ಮುಂದಿನ ಕ್ರಮವಹಿಸಲಾಗುವುದು.

ಆರ್‌ಡಿ 74 ಎಲ್ ಜಿಡಿ 2023

(ಕೃಷ್ಣ ಬೈರೇಗೌಡ)

ಕಂದಾಯ ಸಚಿವರು